ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ ,ಹುಲಕೋಟಿ, ಗದಗ ಜಿಲ್ಲೆ

# ಕೃಷಿ ದರ್ಪಣ

ತ್ರೈಮಾಸಿಕ ಸುದ್ದಿ ಪತ್ರಿಕೆ

ಸಂಪುಟ–2 ಜನೇವರಿ – ಮಾರ್ಚ, 2017 ತ್ರೈಮಾಸಿಕ ಪತ್ರಿಕೆ ಸಂಚಿಕೆ–2

## ಜಿಲ್ಲಾ ಮಟ್ಟದ ಕೃಷಿ ವಸ್ತು ಪ್ರದರ್ಶನ

ಹುಲಕೋಟಿಯ ಶ್ರೀ ಕೈಲಾಸ ಆಶ್ರಮದ ಆವರಣದಲ್ಲಿ ದಿನಾಂಕ 28–01–2017 ರಂದು



ಹುಲಕೋಟಿಯ ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರವು ಜಿಲ್ಲಾ ಮಟ್ಟದ ಕೃಷಿ ವಸ್ತು ಪ್ರದರ್ಶನವನ್ನು ಕೃಷಿ ಇಲಾಖೆಯ ಆತ್ಮ ಯೋಜನೆಯ ಸಹಯೋಗದೊಂದಿಗೆ ಏರ್ಪಡಿಸಿತು. ಶ್ರೀ ಕೈಲಾಸ ಆಶ್ರಮ ಮಹಾಸಂಸ್ಥಾನ, ಬೆಂಗಳೂರು ಇದರ ಪೀಠಾಧಿಪತಿಗಳಾದ ಶ್ರೀ ಜಯೇಂದ್ರಪುರಿ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಶ್ರೀ ಎಚ್.ಕೆ.ಪಾಟೀಲ, ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರು ವಸ್ತು ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿದರು. ಕೃಷಿ ಇಲಾಖೆ ಅಧಿಕಾರಿಗಳಾದ ವಸ್ತು ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರು ಹಾಗೂ ವಿಜ್ಞಾನಿಗಳು ಕೃಷಿ ವಸ್ತು ಪ್ರದರ್ಶನದ ವಿವಿಧ ಮಳಿಗೆಗಳಿಗೆ ಅತಿಥಿಗಳನ್ನು ಹಾಗೂ ಉದ್ಘಾಟಕರನ್ನು ಭೆಟ್ಟಿ ಮಾಡಿಸಿ ಮಾಹಿತಿ ನೀಡಿದರು. ಈ ವಸ್ತು ಪ್ರದರ್ಶನದಲ್ಲಿ ಒಣ ಬೇಸಾಯದಲ್ಲಿ ತೋಟಗಾರಿಕೆ ಬೆಳೆಗಳು ಹಾಗೂ ಹಿಂಗಾರಿ ಬೆಳೆಗಳ ಬೇಸಾಯದ ಕುರಿತು ಮಾಹಿತಿಯನ್ನು ನೀಡಲಾಯಿತು. ಮಣ್ಣು ಮತ್ತು ನೀರು ಸಂರಕ್ಷಣೆಯ ಕ್ರಮಗಳು, ಮಳೆ ನೀರು ಕೊಯ್ಲು, ಕೊಳವೆ ಬಾವಿ ಹಾಗೂ ತೆರೆದ ಬಾವಿಗಳ ಮರುಪೂರಣ, ಪರ್ಯಾಯ ಭೂ ಬಳಕೆ ಪದ್ಧತಿಗಳ ಮಾದರಿ, ಸಮಗ್ರ ಬೇಸಾಯ ಪದ್ಧತಿ, ಸಾವಯವ ಕೃಷಿ ಹಾಗೂ ಪರಿಕರಗಳು ಎರೆಗೊಬ್ಬರ ತಯಾರಿಕೆ, ಜೈವಿಕ ಕೀಟನಾಶಕಗಳು, ಜೈವಿಕ ಗೊಬ್ಬರಗಳು ಹಾಗೂ ಕೀಟಗಳ ಹತೋಟಿಗಾಗಿ ಮೋಹಕ ಬಲೆಗಳ ಮಾಹಿತಿಯನ್ನು ವಸ್ತು ಪ್ರದರ್ಶನದ ಎರಡನೇ ಮಳಿಗೆಯಲ್ಲಿ ಆಯೋಜಿಸಲಾಗಿತ್ತು.



ಪಶು ಸಂಗೋಪನೆ ವಿಭಾಗದಿಂದ ಒಣ ಬೇಸಾಯದಲ್ಲಿ ಬೆಳೆಯಬಹುದಾದ ವಿವಿಧ ಹುಲ್ಲುಗಳು, ನೆಕ್ಕುವ ಉಪ್ಪಿನ ಬಿಲ್ಲೆ, ಒಣ ಮೇವು ರುಚಿಪಡಿಸುವುದು, ಹಾಲು ಕರೆಯುವ ಯಂತ್ರ, ಜಲ ಕೃಷಿಯಿಂದ ಮೇವು ಉತ್ಪಾದನೆ, ಅಜೋಲ್ಲಾ ಉತ್ಪಾದನೆ ಹೀಗೆ ಪಶುಸಂಗೋಪನೆಯ ಹಲವಾರು ತಂತ್ರಜ್ಞಾನಗಳ ಪ್ರದರ್ಶನ ಏರ್ಪಡಿಸುವುದರ ಜೊತೆಗೆ ರೈತರಿಗೆ ಮಾಹಿತಿಯನ್ನು ನೀಡಲಾಯಿತು. ಗ್ರಾಮೀಣ ಮಹಿಳೆಯರಿಗಾಗಿ ಸುಧಾರಿತ ಒಲೆಗಳು, ಆದಾಯ ತರುವಂತಹ ಚಟುವಟಿಕೆಗಳು, ಕೃಷಿಯಲ್ಲಿ ಶ್ರಮ ಕಡಿಮೆ ಮಾಡುವ ಸಾಧನಗಳ ಹಾಗೂ ಪೌಷ್ಠಿಕ ಭದ್ರತೆಗಾಗಿ ತಾರಸಿ ತೋಟ, ಪೌಷ್ಠಿಕ ತೋಟ ನಿರ್ಮಾಣ ಹಾಗೂ ಕುಂಡಾಲಿಯಲ್ಲಿ ತರಕಾರಿಗಳ ಬೇಸಾಯದ ಕುರಿತು ತಿಳುವಳಿಕೆ ಕಾರ್ಯಕ್ರಮ ಏರ್ಪಡಿಸಲಾಯಿತು.

ಹೆಚ್ಚುತ್ತಿರುವ ಆರೋಗ್ಯ ಸಮಸ್ಯೆಯನ್ನು ಕಡಿಮೆ ಮಾಡಲು, ಸಧೃಡ ಆರೋಗ್ಯ ಹೊಂದಲು ಹಾಗೂ ಆರೋಗ್ಯಕರ ಜೀವನಕ್ಕಾಗಿ ಅವಶ್ಯವಿರುವ ಸಿರಿಧಾನ್ಯಗಳ ಬಳಕೆ ಹಾಗೂ ಮಹತ್ವ ಕುರಿತು ಸಿರಿಧಾನ್ಯಗಳ

ಪ್ರದರ್ಶನ ಏರ್ಪಡಿಸಲಾಯಿತು. ಒಣ ಬೇಸಾಯದಲ್ಲಿ ಬೆಳೆಯಬಹುದಾದ ಹಾಗೂ ಕೆಲವೊಂದು ಬಳಕೆಯಲ್ಲಿರಲಾರದಂತಹ ಧಾನ್ಯಗಳ ಪರಿಚಯ ಈ ವಸ್ತು ಪ್ರದರ್ಶನದಲ್ಲಿ ವಿಶೇಷವಾಗಿತ್ತು. ಸಿರಿಧಾನ್ಯಗಳಾದ ನವಣೆ, ಹಾರಕ, ಬರಗು, ಊದಲು, ಕೊರಲೆ, ರಾಗಿ, ಸಜ್ಜೆ, ಸಾಮೆ ಧಾನ್ಯಗಳ ಜೊತೆಗೆ ಅವುಗಳಿಂದ ದಿನ ನಿತ್ಯ ತಯಾರಿಸಬಹುದಾದ ವಿವಿಧ ಮೌಲ್ಯವರ್ಧಿತ ಪದಾರ್ಥಗಳ ಕುರಿತ ಪ್ರದರ್ಶನವು ಜನರನ್ನು ತಟ್ಟಿ ಎಬ್ಬಿಸುವುದರ ಜೊತೆಗೆ ಬಾಯಲ್ಲಿ ನೀರು ತರಿಸುವಂತಿತ್ತು. ಸಿರಿಧಾನ್ಯಗಳಿಂದ ಇಷ್ಟೆಲ್ಲಾ ತಯಾರಿಸಬಹುದಾ!! ಎಂಬ ಉದ್ಘಾರ ಪ್ರತಿಯೊಬ್ಬರ ಬಾಯಿಂದ ಕೇಳ ಬರುತ್ತಿತ್ತು.

ರೈತರ ಕೃಷಿ ಸಮಸ್ಯೆ ಹಾಗೂ ಪರಿಹಾರಗಳಿಗಾಗಿ ಮಾಹಿತಿ ನೀಡಲು ಹಾಗೂ ಮಾಹಿತಿ ಕಳುಹಿಸಲು ರೈತರ ಮೊಬೈಲ ನಂಬರನ್ನು ನೋಂದಣಿ ಮಾಡುವ ಕಾರ್ಯವನ್ನು ಈ ವಸ್ತು ಪ್ರದರ್ಶನದಲ್ಲಿ ಏರ್ಪಡಿಸಲಾಗಿತ್ತು.

ಕೃಷಿ ಯಂತ್ರೋಪಕರಣಗಳಾದ ಸೈಕಲ್ ವ್ಹೀಡರ, ಸ್ಪೈರಲ್ ಸಪರೇಟರ, ಶೇಂಗಾ ಒಡೆಯುವ ಹಾಗೂ ಶೇಂಗಾ ಹರಿಯುವ ಸಾಧನ, ಬಿತ್ತುವ ಕೂರಿಗೆ, ಸಣ್ಣ ಟ್ರ್ಯಾಕ್ಟರ ಹೀಗೆ ಹಲವಾರು ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ತಂತ್ರಜ್ಞಾನ ನೆರವಿನೊಂದಿಗೆ ವಿವಿಧ ಆಹಾರ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುತ್ತಿರುವ ಮಹಿಳಾ ಉದ್ದಿಮೆದಾರರಿಗೆ ಆಹಾರ ಪದಾರ್ಥ ಮಾರಾಟ ಮಾಡಲು ವ್ಯವಸ್ಥೆ ಕಲ್ಪಿಸಲಾಗಿತ್ತು. ಸಾಂಪ್ರದಾಯಕ ಆಹಾರಗಳು, ಸಿರಿಧಾನ್ಯಗಳ ಆಹಾರ, ಹುಣಸೆ ಹಣ್ಣಿನ ಉತ್ಪನ್ನಗಳು ಈ ಮಳಿಗೆಗಳಲ್ಲಿ ವಿಶೇಷವಾಗಿದ್ದವು.

ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಿಂದ ಪ್ರಕಟಣೆಗೊಂಡ ಹಸ್ತಪ್ರತಿಗಳು, ವಿಸ್ತರಣಾ ಪ್ರತಿಗಳು, ಕೃಷಿ ವಿಜ್ಞಾನ ಪತ್ರಿಕೆ, ಕೃಷಿಗೆ ಸಂಬಂಧಿತ ಪುಸ್ತಕಗಳು, ಸಂಶೋಧನಾ ಲೇಖನಗಳು, ಯಶಸ್ವಿ ರೈತರ ಕತೆಗಳ ಪ್ರಕಟಣೆಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಒಟ್ಟಾರೆಯಾಗಿ ಕೃಷಿ ವಸ್ತು ಪ್ರದರ್ಶನವು ರೈತರಿಗೆ ಮಾಹಿತಿಯನ್ನು ನೀಡುವುದರ ಜೊತೆಗೆ ನಮ್ಮೂರ ಜಾತ್ರೆ ಪ್ರತಿಯೊಬ್ಬರಿಗೂ ವಿಶೇಷ ಮುದ ನೀಡುವಂತಿತ್ತು.

## ರೈತ ಅನುಶೋಧಕರ ಕಾರ್ಯಾಗಾರ




ಹುಲಕೋಟಿಯ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 22-03-2017 ರಂದು ಜಿಲ್ಲಾ ಮಟ್ಟದ "ರೈತ ಅನುಶೋಧಕರ ಕಾರ್ಯಾಗಾರ" ವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ॥ ಜಿ. ಸೋಮನಗೌಡರ, ವಿಜ್ಞಾನಿಗಳು, ಕೃಷಿ ಸಂಶೋಧನ ಕೇಂದ್ರ, ಅಣ್ಣಿಗೇರಿ ಇವರು ಮಾತನಾಡಿ, ಅನೇಕ ರೈತರು ತಮ್ಮ ಪಾರಂಪರಿಕ ಜ್ಞಾನದಿಂದ ಕೃಷಿಯಲ್ಲಿ ಸಂಶೋಧನೆಯನ್ನು ಕೈಗೊಂಡಿದ್ದು, ಅವರ ಸಂಶೋಧನೆಯ ಫಲ ಇತರೆ ರೈತರಿಗೆ ತಲುಪಿಸುವ ಅಗತ್ಯತೆ ಇದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ರೈತ ಅನುಶೋಧಕರ ಅನುಭವಗಳನ್ನು ದಾಖಲಾತಿ ಮಾಡಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ ಕೆವಿಕೆ ಮುಖ್ಯಸ್ಥರಾದ ಡಾ॥ಎಲ್.ಜಿ.ಹಿರೇಗೌಡರ ಅವರು ರೈತ ಅನುಶೋಧಕರ ಕಾರ್ಯಾಗಾರದ ಉದ್ದೇಶ ಹಾಗೂ ಮಹತ್ವದ ಬಗ್ಗೆ ಮಾತನಾಡಿದರು. ಪ್ರಗತಿಪರ ರೈತರು ಹಾಗೂ ರೈತ ಅನುಶೋಧಕರಾದ ವಿಶ್ವನಾಥ ಹಿರೇಗೌಡರ, ಜಿ.ಸಿ.ಕೊರವನವರ, ರಾಜೇಂದ್ರ ಶಿರೋಳ ಹಾಗೂ ಉಳಿದ 22 ಜನ ರೈತ ಅನುಶೋಧಕರು, ಮಣ್ಣು ಮತ್ತು ನೀರು ಸಂರಕ್ಷಣೆ, ಸಾವಯವ ಕೃಷಿ, ತೋಟಗಾರಿಕೆ, ದೇಶಿ ಬೀಜಗಳ ಸಂರಕ್ಷಣೆ, ಸಮಗ್ರ ಕೃಷಿ ಪದ್ಧತಿ, ಜೀವ ವೈವಿಧ್ಯತೆ, ಅಂತರ ಬೆಳೆ ಪದ್ಧತಿ ಮುಂತಾದ ಕ್ಷೇತ್ರಗಳಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡರು ಹಾಗೂ ಇವುಗಳನ್ನು ದಾಖಲೀಕರಿಸಿಕೊಳ್ಳಲಾಯಿತು.

## "ಸಸ್ಯ ತಳಿಗಳ ಹಾಗೂ ರೈತರ ಹಕ್ಕುಗಳ ರಕ್ಷಣೆ ಕುರಿತು ಜಾಗೃತಿ ಶಿಬಿರ ಮತ್ತು ತರಬೇತಿ"

ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಹಾಗೂ ಸಸ್ಯ ತಳಿಗಳ ಹಾಗೂ



ರೈತರ ಹಕ್ಕುಗಳ ರಕ್ಷಣಾ ಪ್ರಾಧಿಕಾರ, ನವದೆಹಲಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 31-03-2017 ರಂದು "ಸಸ್ಯ ತಳಿಗಳ ಹಾಗೂ ರೈತರ ಹಕ್ಕುಗಳ ರಕ್ಷಣೆ" ಕುರಿತು ಜಾಗೃತಿ ಶಿಬಿರ ಮತ್ತು ತರಬೇತಿ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಶ್ರೀ ಮಂಜುನಾಥ ಚವ್ಹಾಣ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಗದಗ ಇವರು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು. ನಂತರ ಮಾತನಾಡಿದ ಅವರು ತಲೆ ತಲಾಂತರದಿಂದ ಪೂರ್ವಜರು ವಿರಳವಾದ ವಿವಿಧ ಬೆಳೆ ತಳಿಗಳ ಸಂರಕ್ಷಣೆಯನ್ನು ಮಾಡುತ್ತಾ ಬಂದಿದ್ದು, ಈ ತಳಿಗಳು ದೇಶದ ಜನತೆಗೆ ಆಹಾರ, ಆರೋಗ್ಯ ಹಾಗೂ ಜೀವಸತ್ವಗಳ ಭದ್ರತೆ ಒದಗಿಸಬಲ್ಲವು ಎಂದು ಹೇಳಿದರು. ಈ ದೇಸಿ ತಳಿಗಳಲ್ಲಿ ಬರ, ರೋಗ ಹಾಗೂ ಕೀಟ ನಿರೋಧಕತೆ ಮತ್ತು ಉಪಯುಕ್ತ ಪೌಷ್ಠಿಕತೆ ಇರುವುದರಿಂದ ಇವುಗಳು ನಶಿಸಿ ಹೋಗದಂತೆ ಸಂರಕ್ಷಣೆ ಮಾಡುವ ಅಗತ್ಯತೆ ಇದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ಕೇಂದ್ರ ಸರಕಾರವು ಸಸ್ಯ ತಳಿಗಳ ಹಾಗೂ ರೈತರ ಹಕ್ಕುಗಳ ಪ್ರಾಧಿಕಾರವನ್ನು ಸ್ಥಾಪಿಸಿದ್ದು, ಸಸ್ಯ ತಳಿಗಳ ಸಂರಕ್ಷಣೆ ಕಾರ್ಯವನ್ನು ಮಾಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಡಾ॥ ಐ.ಎಸ್.ಕಟಗೇರಿ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಜೈವಿಕ ತಂತ್ರಜ್ಞಾನ ವಿಭಾಗ, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಮಾತನಾಡಿ 2001 ರಲ್ಲಿ ರೈತರ ಹಕ್ಕುಗಳ ಕಾಯ್ದೆಯನ್ನು ಜಾರಿ ಮಾಡಲಾಗಿದ್ದು, ಈ ಕಾಯ್ದೆಯು ಸಸ್ಯ ತಳಿ ಸಂರಕ್ಷಣೆಯಲ್ಲಿ ತೊಡಗಿದ ರೈತರ ಹಕ್ಕುಗಳನ್ನು ಸಂರಕ್ಷಿಸುತ್ತಿದೆ ಎಂದು ಹೇಳಿದರು. ವಿರಳವಾಗಿ ಬೆಳೆದ ತಳಿಗಳನ್ನು ಸಂರಕ್ಷಿಸುತ್ತಿರುವ ರೈತರು ಪ್ರಾಧಿಕಾರದಲ್ಲಿ ನೋಂದಾಯಿಸಬೇಕೆಂದು ವಿನಂತಿಸಿದರು.

ಅತಿಥಿಗಳಾಗಿ ಆಗಮಿಸಿದ್ದ ಸಿ.ಬಿ.ಬಾಲರಡ್ಡಿ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಗದಗ ಮಾತನಾಡಿ ದೇಸಿ ಬೀಜಗಳ ವಂಶವಾಹಿನಿಗಳಲ್ಲಿ ಉತ್ತಮವಾದ ಗುಣಧರ್ಮ ಇದ್ದು, ಹೊಸ ತಳಿಗಳ ಅಭಿವೃದ್ಧಿಯಲ್ಲಿ ಬಳಸಬಹುದೆಂದು ತಿಳಿಸಿದರು. ಇನ್ನೋರ್ವ ಅತಿಥಿಗಳಾಗಿ ಎಚ್.ಆರ್.ಅಮರನಾಥ, ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಗದಗ ಇವರು ಹಿಪ್ಪು ನೇರಳೆ ದೇಶಿ ತಳಿಗಳ ಬಗ್ಗೆ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷ ಸ್ಥಾನವಹಿಸಿದ್ದ ಚನ್ನಪ್ಪ ಆರ್. ಬೂದಿಹಾಳ, ಅಧ್ಯಕ್ಷರು, ಗದಗ, ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳ ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಒಕ್ಕೂಟ ನಿಗಮ, ಧಾರವಾಡ ಇವರು ಮಾತನಾಡಿ, ದೇಶಿ ಬೀಜಗಳ ಬೀಜೋತ್ಪಾದನೆಗೆ, ಸರಕಾರವು ಪ್ರೋತ್ಸಾಹಿಸಬೇಕೆಂದು ಹೇಳಿದರು.

ಪ್ರಾರಂಭದಲ್ಲಿ ಕೆವಿಕೆ ಮುಖ್ಯಸ್ಥರಾದ ಡಾ॥ಎಲ್.ಜಿ.ಹಿರೇಗೌಡರ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಸಸ್ಯ ತಳಿಗಳ ಪ್ರಾಧಿಕಾರದ ಚಟುವಟಿಕೆಗಳು ಹಾಗೂ ಕಾರ್ಯಾಗಾರದ ಉದ್ದೇಶಗಳನ್ನು ವಿವರಿಸಿದರು.



ಈ ಕಾರ್ಯಕ್ರಮದಲ್ಲಿ ಗದಗ ಜಿಲ್ಲೆಯ ದೇಶಿ ಬೀಜಗಳ ಸಂರಕ್ಷಕರು ಕೆವಿಕೆ ಏರ್ಪಡಿಸಿದ ದೇಶಿ ಬೀಜಗಳ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಈ ಸಮಾರಂಭದಲ್ಲಿ ಬೀಜ ಸಂರಕ್ಷಣೆ ಮಾಡುತ್ತಿರುವ ಒಂಭತ್ತು ಜನ ರೈತರಿಗೆ ಪ್ರಶಂಸನಾ ಪತ್ರ ನೀಡಿ ಸನ್ಮಾನಿಸಲಾಯಿತು. ಉದ್ಘಾಟನಾ ಸಮಾರಂಭದ ನಂತರ ಸಸ್ಯ ತಳಿಗಳ ಸಂರಕ್ಷಣೆ ಬಗ್ಗೆ ಉಪನ್ಯಾಸ, ಚರ್ಚಾ ಗೋಷ್ಠಿ ನೆರವೇರಿದವು. ಕಾರ್ಯಕ್ರಮದಲ್ಲಿ ಜಿಲ್ಲೆಯ 250 ಕ್ಕೂ ಹೆಚ್ಚಿನ ಜನ ರೈತರು ಭಾಗವಹಿಸಿದ್ದರು.



## ಗೋಡಂಬಿ ಬೇಸಾಯ ಕುರಿತು ವಿಚಾರ ಗೋಷ್ಠಿ

ಹುಲಕೋಟಿಯ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 25-03-2017 ರಂದು "ಗೋಡಂಬಿ ಬೇಸಾಯದ ವಿಚಾರ ಗೋಷ್ಠಿ" ಯನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಜಿ.ಆರ್. ಓದುಗೌಡರ, ಅಧ್ಯಕ್ಷರು, ಮಾವು ಬೆಳೆಗಾರರ ಸಂಘ, ಹುಲಕೋಟಿ ಇವರು ಮಾತನಾಡಿ, ಗದಗ ಜಿಲ್ಲೆಯಲ್ಲಿ ಗೋಡಂಬಿ ಬೇಸಾಯಕ್ಕೆ ಮಣ್ಣು ಮತ್ತು ಹವಾಮಾನ ಸೂಕ್ತವಾಗಿದ್ದು, ರೈತರು ಗೋಡಂಬಿ ಬೆಳೆಯನ್ನು ಬೆಳೆಯಬೇಕೆಂದು ತಿಳಿಸಿದರು. ಈಗಾಗಲೇ ಕೆವಿಕೆ ತಾಂತ್ರಿಕ ಬೆಂಬಲದಿಂದ ಹುಲಕೋಟಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ರೈತರು ಗೋಡಂಬಿ ಬೆಳೆಯನ್ನು ಯಶಸ್ವಿಯಾಗಿ ಬೆಳೆಯುತ್ತಿದ್ದು, ಗೋಡಂಬಿ ಕ್ಷೇತ್ರವನ್ನು ವಿಸ್ತರಿಸುವ ಅಗತ್ಯತೆ ಇದೆ ಎಂದು ಹೇಳಿದರು. ಕೆವಿಕೆ ಮುಖ್ಯಸ್ಥರಾದ ಡಾ॥ಎಲ್.ಜಿ.ಹಿರೇಗೌಡರ ಮಾತನಾಡಿ, ಕೃಷಿ ವಿಜ್ಞಾನ ಕೇಂದ್ರವು 2007-08 ರಲ್ಲಿ 10 ವಿವಿಧ ಗೋಡಂಬಿ ತಳಿಗಳ ಪ್ರಾತ್ಯಕ್ಷಿಕೆಯನ್ನು ಅಭಿವೃದ್ಧಿಪಡಿಸಿದ್ದು, ಎಲ್ಲ ತಳಿಗಳು ಸಮೃದ್ಧವಾಗಿ ಬೆಳೆದಿದ್ದು, ಉತ್ತಮ ಇಳುವರಿಯನ್ನು ಕೊಡುತ್ತಿವೆ ಎಂದು ತಿಳಿಸಿದರು. ಮುಂದುವರೆದು ಮಾತನಾಡಿದ ಅವರು ಕೆವಿಕೆ ಸಂಸ್ಥೆಯು ಗೋಡಂಬಿ ಅಭಿವೃದ್ಧಿ ಮಂಡಳ, ಕೋಚಿನ್ ಇವರ ಸಹಯೋಗದೊಂದಿಗೆ ಗದಗ ಜಿಲ್ಲೆಯಲ್ಲಿ ಗೋಡಂಬಿ ಬೆಳೆ ಉತ್ತೇಜನಕ್ಕಾಗಿ ಕ್ರಿಯಾ ಯೋಜನೆಯನ್ನು ರೂಪಿಸಿದ್ದು, ರೈತರು ತಮ್ಮ ಹೆಸರನ್ನು ಕೆವಿಕೆಯಲ್ಲಿ ನೋಂದಾಯಿಸಬೇಕೆಂದು ತಿಳಿಸಿದರು.




ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಅಗ್ರಿಕಲ್ಚರಲ್ ಸೈನ್ಸ್ ಫೌಂಡೇಶನ್, ಸಂಸ್ಥೆಯ ನಿರ್ದೇಶಕರಾದ ಆರ್.ಎನ್. ದೇಶಪಾಂಡೆ ವಹಿಸಿದ್ದರು. ಅತಿಥಿಗಳಾಗಿ ಪ್ರಗತಿಪರ ರೈತರಾದ ಈಶ್ವರಪ್ಪ ಹಂಚಿನಾಳ, ವಿಶ್ವನಾಥಗೌಡ ಹಿರೇಗೌಡರ, ರಾಜೇಂದ್ರ ಶಿರೋಳ ಹಾಗೂ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಬಿರಾದಾರ ಪಾಲ್ಗೊಂಡಿದ್ದರು. ತೋಟಗಾರಿಕೆ ತಜ್ಞರಾದ ಕೆ.ಟಿ.ಪಾಟೀಲ, ಗೋಡಂಬಿ ಬೇಸಾಯದ ಬಗ್ಗೆ ಉಪನ್ಯಾಸ ನೀಡಿದರು. ಗೋಡಂಬಿಯನ್ನು ಯಶಸ್ವಿಯಾಗಿ ಬೆಳೆದ ರೈತರಾದ ಸಿದ್ದಪ್ಪ ಕರಿಕಟ್ಟಿ ತಮ್ಮ ಅನುಭವ ಹಂಚಿಕೊಂಡರು. ಕೃಷಿ ವಿಜ್ಞಾನ ಕೇಂದ್ರದ ಗೋಡಂಬಿ ಪ್ರಾತ್ಯಕ್ಷಿಕೆ ಘಟಕಕ್ಕೆ ಹಾಗೂ ಗೋಡಂಬಿ ಬೆಳೆದ ರೈತರ ಹೊಲಗಳಿಗೆ ಕ್ಷೇತ್ರ ಭೆಟ್ಟಿಯನ್ನು ಏರ್ಪಡಿಸಲಾಗಿತ್ತು. ಕೃಷಿ ವಿಸ್ತರಣಾ ತಜ್ಞರಾದ ಎಸ್.ಎಚ್.ಆದಾಪೂರ ಸ್ವಾಗತಿಸಿದರು. ಎನ್.ಎಚ್.ಭಂಡಿ ವಂದಿಸಿದರು. ಕಾರ್ಯಕ್ರಮದಲ್ಲಿ 150 ಕ್ಕೂ ಹೆಚ್ಚು ಜನ ರೈತರು ಪಾಲ್ಗೊಂಡಿದ್ದರು.



## ವಿಶ್ವ ಜಲ ದಿನಾಚರಣೆ

ಹುಲಕೋಟಿಯ ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 22-03-2017 ರಂದು "ವಿಶ್ವ ಜಲ ದಿನಾಚರಣೆ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಜೆ.ಕೆ.ಜಮಾದಾರ, ಖ್ಯಾತ ಲೇಖಕರು ಹಾಗೂ ಪತ್ರಕರ್ತರು ಇವರು ಮಾತನಾಡಿ, ಹವಾಮಾನ ವೈಪರೀತ್ಯದಿಂದ ಮಳೆ ಪ್ರಮಾಣ ಹಾಗೂ ಹಂಚಿಕೆಯಲ್ಲಿ ಏರು-ಪೇರಾದರೂ ಬಿದ್ದ ಒಂದೆರಡು ಮಳೆಗಳ ನೀರನ್ನು ಭೂತಾಯಿ ಒಡಲಿಗೆ ತಲುಪಿಸುವ ಕಾರ್ಯ ತ್ವರಿತವಾಗಿ ಆಗಬೇಕು ಎಂದು ಹೇಳಿದರು. ಈ ನಿಟ್ಟಿನಲ್ಲಿ ಕೃಷಿ ಹೊಂಡಗಳ ನಿರ್ಮಾಣದ ಜೊತೆಗೆ ಈಗಾಗಲೇ ಅಸ್ತಿತ್ವದಲ್ಲಿರುವ ಕೆರೆಗಳ ಹೂಳೆತ್ತುವುದರ ಮುಖಾಂತರ ಪುನಶ್ಚೇತನ ಮಾಡಬೇಕಾಗಿದೆ ಎಂದು ತಿಳಿಸಿದರು. ಪ್ರತಿ ಹೆಕ್ಟೇರಿಗೆ ಒಂದರಂತೆ ಕೃಷಿ ಹೊಂಡಗಳನ್ನು ನಿರ್ಮಿಸಿ ರೈತರು ಕೃಷಿಯಲ್ಲಿ ಸಫಲತೆಯನ್ನು ಕಾಣಬೇಕೆಂದು



ಕರೆಕೊಟ್ಟರು. ಈ ನಿಟ್ಟಿನಲ್ಲಿ ರೈತರಿಗೆ ಜಲ ಸಾಕ್ಷರತೆ ಬಗ್ಗೆ ತಿಳುವಳಿಕೆ ಶಿಬಿರಗಳನ್ನು ಏರ್ಪಡಿಸುವ ಅಗತ್ಯವಿದ್ದು, “ನೀರು ಉಳಿಸಿ–ಜೀವನ ಉಳಿಸಿ” ಎಂಬ ತತ್ವವನ್ನು ಎಲ್ಲರೂ ಅಳವಡಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕೆವಿಕೆ ಮುಖ್ಯಸ್ಥರಾದ ಡಾ॥ ಎಲ್.ಜಿ.ಹಿರೇಗೌಡರ ಅವರು “ವಿಶ್ವ ಜಲ ದಿನಾಚರಣೆ” ಮಹತ್ವದ ಬಗ್ಗೆ ಮಾತನಾಡಿದರು. ಅತಿಥಿಗಳಾಗಿ ರಾಜೇಂದ್ರ ಶಿರೋಳ, ಸದಸ್ಯರು, ವಿಸ್ತರಣಾ ಕೌನ್ಸಿಲ್, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ ಇವರು ಬೆಳವಣಕಿ ಗ್ರಾಮದಲ್ಲಿ ಕೈಗೊಂಡ ಮಳೆ ನೀರು ಕೊಯ್ಲು ಕಾರ್ಯದ ಅನುಭವವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ವಿಶ್ವನಾಥ ಹಿರೇಗೌಡರ, ಸದಸ್ಯರು, ಸಂಶೋಧನಾ ಕೌನ್ಸಿಲ್, ಕೃಷಿ ವಿಶ್ವ ವಿದ್ಯಾಲಯ, ಧಾರವಾಡ, ಜಿ.ಸಿ.ಕೊರವನವರ, ಸದಸ್ಯರು, ಕೃಷಿ ಮಾರುಕಟ್ಟೆ ಸಮಿತಿ, ಗದಗ ಇವರು ಉಪಸ್ಥಿತರಿದ್ದರು. ಈ ಸಮಾರಂಭದಲ್ಲಿ ಕೃಷಿಯಲ್ಲಿ ಸಾಧನೆ ಮಾಡಿದ 22 ಜನ ರೈತ ಅನುಶೋಧಕರನ್ನು ಸನ್ಮಾನಿಸಲಾಯಿತು. ಸುಮಾರು 200 ಕ್ಕೂ ಹೆಚ್ಚು ಜನ ರೈತರು ಹಾಗೂ ರೈತ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಐ.ಸಿ.ಎ.ಆರ್.–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ 08–03–2017 ರಂದು



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಹುಲಕೋಟಿಯ ಸ್ವಾಮಿ ವಿವೇಕಾನಂದ ಪಿಯು ಸೈನ್ಸ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊಫೆಸರ್ ಪ್ರಿಯಾ ಪಾಟೀಲ ಅವರು ನೇರವೇರಿಸಿ, ಮಹಿಳೆಯರು ಹೊಸ ಹೊಸ ತಂತ್ರಜ್ಞಾನಗಳನ್ನು ಕಲಿತು, ಅಳವಡಿಸಿಕೊಂಡು ಆರ್ಥಿಕವಾಗಿ ಪ್ರಗತಿಹೊಂದಬೇಕೆಂದು ಕರೆಕೊಟ್ಟರು. ಕೇಂದ್ರದ ಮುಖ್ಯಸ್ಥರಾದ ಡಾ॥ ಎಲ್.ಜಿ.ಹಿರೇಗೌಡರ ಅವರು ಮಹಿಳೆಯರು ಜ್ಞಾನದ ಜೊತೆಗೆ ಉತ್ತಮ ಕೌಶಲ್ಯಗಳನ್ನು ಪಡೆದು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರಬೇಕೆಂದು ತಿಳಿಸಿದರು. ಅತಿಥಿಗಳಾಗಿ ಆಗಮಿಸಿದ್ದ ಶ್ರೀಮತಿ ಲಲಿತಾ ಅಸೂಟಿ ಅವರು ಮಾತನಾಡಿ ಮಹಿಳೆ ಅಭಿವೃದ್ಧಿ ಹೊಂದಿದರೆ ದೇಶವೇ ಅಭಿವೃದ್ಧಿ ಹೊಂದಿದಂತೆ, ಮಹಿಳೆಯರು ಧೈರ್ಯದಿಂದ ಉತ್ತಮ ಕೆಲಸ ಮಾಡಿ, ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕೆಂದು ಹೇಳಿದರು. ಗಿಟಸರ್ಡ ಕೇಂದ್ರದ ಹೊರಗೆ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಚಂದ್ರಶೇಖರ ಕುಂಬಾರ ಇವರು ಇಂತಹ ಕಾರ್ಯಕ್ರಮದಲ್ಲಿ ಮಹಿಳೆಯರು ಭಾಗವಹಿಸಿ ಲಾಭ ಪಡೆಯಬೇಕೆಂದು ತಿಳಿಸಿದರು. ಪ್ರಾರಂಭದಲ್ಲಿ ಕುಮಾರಿ ರಾಜೇಶ್ವರಿ ಅಯ್ಯಮ್ಮನವರ ಸ್ವಾಗತ ಗೀತೆಯನ್ನು ಹಾಡಿದರು. ಕೇಂದ್ರದ ವಿಜ್ಞಾನಿಯಾದ ಶ್ರೀ ಎಸ್.ಕೆ.ಮುದ್ಲಾಪೂರ ಇವರು ಸ್ವಾಗತ ಕೋರಿ, ಕಾರ್ಯಕ್ರಮ ನಿರೂಪಿಸಿದರು ಹಾಗೂ ಗಿಟಸರ್ಡ ಸಂಸ್ಥೆಯ ಶ್ರೀಮತಿ ಲೀಲಾ ಸಂಕಣ್ಣವರ ವಂದನಾರ್ಪಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ 60 ಜನ ಮಹಿಳೆಯರು ಭಾಗವಹಿಸಿದ್ದರು.

## ರೈತರಿಂದ – ರೈತರಿಗೆ ಕೃಷಿ ಕಾರ್ಯಾನುಭವ ತರಬೇತಿ

ಕೃಷಿ ವಿಶ್ವವಿದ್ಯಾಲಯ ಧಾರವಾಡ, ಐ.ಸಿ.ಎ.ಆರ್–ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ



ಹಾಗೂ ಕೃಷಿ ಇಲಾಖೆ, ಗದಗ ಇದರ ಸಂಯುಕ್ತ ಆಶ್ರಯದಲ್ಲಿ ಎರಡು ವಿನೂತನ ತರಬೇತಿಗಳನ್ನು ದಿನಾಂಕ 02–03–2017 ರಿಂದ 04–03–2017 ಹಾಗೂ 17–03–2017 ರಿಂದ 19–03–2017 ರವರೆಗೆ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮಗಳ ಉದ್ಘಾಟನೆಯನ್ನು ಶ್ರೀ ಸಿ.ಬಿ.ಬಾಲರಡ್ಡಿ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಗದಗ ಇವರು ನೆರವೇರಿಸಿ, ಹಲವಾರು ರೈತರು ತಮ್ಮ ಸತತ ಪ್ರಯತ್ನ ಹಾಗೂ ಸಂಶೋಧನೆಗಳಿಂದ ಕೃಷಿಯಲ್ಲಿ ಆವಿಷ್ಕಾರಗಳನ್ನು ಹುಟ್ಟುಹಾಕಿ ಯಶಸ್ವಿಯಾಗಿದ್ದು, ಅಂತಹ ರೈತರ ಅನುಭವಗಳನ್ನು ಇತರೆ ರೈತರಿಗೆ ತಿಳಿಸುವ ಈ ತರಬೇತಿಯು ಮಹತ್ತರವಾಗಿದ್ದು ಇಂತಹ ಇನ್ನೂ ಹೆಚ್ಚಿನ ತರಬೇತಿಗಳನ್ನು ಸಂಘಟಿಸುವ ಅವಶ್ಯಕತೆ ಇದೆ ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ

ವಹಿಸಿದ್ದ ಕೆ.ವಿ.ಕೆ ಮುಖ್ಯಸ್ಥರಾದ ಡಾ॥ ಎಲ್.ಜಿ.ಹಿರೇಗೌಡರ ಮಾತನಾಡಿ ರೈತರಿಂದ ರೈತರಿಗೆ ತರಬೇತಿ ಹಾಗೂ ಕ್ಷೇತ್ರ ಭೆಟ್ಟಿ ಮುಖ್ಯವಾಗಿದ್ದು, ಪ್ರಗತಿಪರ ರೈತರ ಆವಿಷ್ಕಾರಗಳ ಕಾರ್ಯಾನುಭವ ಇತರೆ ರೈತರಿಗೆ ಆಗಲಿದೆ ಎಂದು ತಿಳಿಸಿದರು. ಈ ಎರಡೂ ತರಬೇತಿಗಳಲ್ಲಿ ಗದಗ ಜಿಲ್ಲೆಯಲ್ಲಿ ಕೃಷಿಯಲ್ಲಿ ಆವಿಷ್ಕಾರಗಳನ್ನು ಕೈಗೊಂಡ ಪ್ರಗತಿಪರ ರೈತರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ತಮ್ಮ ಅನುಭವವನ್ನು ಹಂಚಿಕೊಂಡರು. ವಿಶೇಷವಾಗಿ



- ಶ್ರೀ ವಿಶ್ವನಾಥ ಹಿರೇಗೌಡರ, ಪ್ರಗತಿಪರ ರೈತರು ಹಾಗೂ ಪ್ರಶಸ್ತಿ ವಿಜೇತರು, ಹುಲಕೋಟಿ, ಗದಗ ತಾಲೂಕ, ಇವರು ಕಪ್ಪು ಮಣ್ಣಿನಲ್ಲಿ ತೋಟಗಾರಿಕೆ ಬೆಳೆಗಳು, ಈರುಳ್ಳಿ ಬೀಜೋತ್ಪಾದನೆ ಹಾಗೂ ಜೇನು ಸಾಕಾಣಿಕೆ ಕುರಿತು ತಮ್ಮ ಅನುಭವವನ್ನು ಇತರೇ ರೈತರೊಂದಿಗೆ ಹಂಚಿಕೊಂಡರು.
- ಶ್ರೀ ರಾಜೇಂದ್ರ ಶಿರೋಳ, ಪ್ರಗತಿಪರ ರೈತರು, ಬೆಳವಣಕಿ ಗ್ರಾಮ, ರೋಣ ತಾಲೂಕ, ಇವರು ಔಷಧೀಯ ಬೆಳೆಗಳ ಮುಖ್ಯವಾಗಿ ಅಶ್ವಗಂಧ ಬೆಳೆಯ ಉತ್ಪಾದನೆ, ಬೇಸಾಯ ಪದ್ಧತಿಗಳು, ಮಾರುಕಟ್ಟೆ ಹಾಗೂ ಒಪ್ಪಂದ ಕೃಷಿ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು.



- ಶ್ರೀ ಸಿದ್ದಪ್ಪ ಕರಿಕಟ್ಟಿ, ಪ್ರಗತಿಪರ ರೈತರು, ಹುಲಕೋಟಿ, ಗದಗ ತಾಲೂಕ, ಇವರು ಕೆಂಪು ಮಣ್ಣಿನಲ್ಲಿ ಹಣ್ಣಿನ ಬೆಳೆಗಳಾದ ಮಾವು ಹಾಗೂ ಗೋಡಂಬಿ ಬೇಸಾಯ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು.



- ಶ್ರೀ ಬಸವರಾಜ ನಾವಿ, ಸಾವಯವ ಕೃಷಿಕರು ಹಾಗೂ ಪ್ರಶಸ್ತಿ ವಿಜೇತರು, ಸುಗ್ನಳ್ಳಿ, ಶಿರಹಟ್ಟಿ ತಾಲೂಕ, ಇವರು ಸಮಗ್ರ ಕೃಷಿ ಪದ್ಧತಿ ಹಾಗೂ ಸಾವಯವ ಕೃಷಿಯಲ್ಲಿ ತಾವು ಅಳವಡಿಸಿದ ವಿಧಾನಗಳು ಹಾಗೂ ಸಾವಯವ ಕೃಷಿಯಲ್ಲಿ ತೋಟಗಾರಿಕೆ ಬೆಳೆಗಳು, ಒಪ್ಪಂದ ಕೃಷಿ, ಮಾರುಕಟ್ಟೆ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು.
- ಶ್ರೀ ಅಶೋಕ ಹಳ್ಳಿ, ಶ್ಯಾಗೋಟಿ ಗ್ರಾಮ, ಗದಗ ತಾಲೂಕು ಇವರು ದೇಸಿ ಬೀಜಗಳ ಉತ್ಪಾದನೆ, ಸಮಗ್ರ ಕೃಷಿ ಪದ್ಧತಿ ಹಾಗೂ ಮೇವಿನ ಬ್ಯಾಂಕ ಕುರಿತು ಮಾಹಿತಿಯನ್ನು ನೀಡಿದರು.
- ಶ್ರೀ ಜಿ.ಸಿ.ಕೊರವನವರ, ಸದಸ್ಯರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಪ್ರಗತಿಪರ ರೈತರು, ಹೊಂಬಳ ಗ್ರಾಮ, ಗದಗ ತಾಲೂಕ, ಇವರು ಕಪ್ಪು ಮಣ್ಣಿನಲ್ಲಿ ಬೆಳೆ ಪದ್ಧತಿ, ಸಾವಯವ ಕೃಷಿ ಹಾಗೂ ಕೃಷಿ ಮಾರುಕಟ್ಟೆ ವಿಷಯವಾಗಿ ತಮ್ಮ ಅನುಭವವನ್ನು ಹಂಚಿಕೊಂಡರು.
- ಶ್ರೀ ದೇವೆಂದ್ರಪ್ಪ ಗೋಣೆಪ್ಪನವರ, ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗೂ ಪ್ರಗತಿಪರ ರೈತರು, ಹೊಸಳ್ಳಿ ಗ್ರಾಮ, ಗದಗ ತಾಲೂಕ, ಇವರು ಸಮಗ್ರ ಕೃಷಿ ಪದ್ಧತಿ, ಸಾವಯವ ಕೃಷಿ, ಸಸಿಗಳ ಉತ್ಪಾದನೆ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಈ ಎರಡೂ ವಿಶೇಷ ಕಾರ್ಯಕ್ರಮಗಳಲ್ಲಿ ರೈತರ ಆವಿಷ್ಕಾರಗಳನ್ನು ವೀಕ್ಷಿಸಲು ಹಾಗೂ ಅನುಭವ ಹೊಂದಲು ಕ್ಷೇತ್ರ ಭೆಟ್ಟಿಗಳನ್ನು ಏರ್ಪಡಿಸಲಾಯಿತು. ಮುಖ್ಯವಾಗಿ ಸಮಗ್ರ ಬೇಸಾಯ ಪದ್ಧತಿ, ಒಣ ಬೇಸಾಯದಲ್ಲಿ ಮಾವು ಮತ್ತು ಗೋಡಂಬಿ ಬೇಸಾಯ, ಎರೆಹುಳು ಸಾಕಾಣಿಕೆ, ಸಾವಯವ ಕೃಷಿ, ದೇಶಿ ಬೀಜಗಳ ಸಂರಕ್ಷಣೆ, ಮೇವಿನ ಬ್ಯಾಂಕ್, ಔಷಧೀಯ ಸಸ್ಯಗಳು, ಕಪ್ಪು ಮಣ್ಣಿನಲ್ಲಿ ತೋಟಗಾರಿಕೆ ಬೆಳೆಗಳು, ಹೀಗೆ ಹಲವಾರು ಸಂಪನ್ಮೂಲ ವ್ಯಕ್ತಿಗಳ ಕ್ಷೇತ್ರಕ್ಕೆ / ಹೊಲಗಳಿಗೆ ಭೆಟ್ಟಿಗಳನ್ನು ಏರ್ಪಡಿಸಲಾಗಿತ್ತು. ಹೀಗೆ ಈ ತರಬೇತಿಗಳಲ್ಲಿ ರೈತರಿಗೆ ಕ್ಷೇತ್ರ ವೀಕ್ಷಣೆ ಹಾಗೂ ಅನುಭವ ಹಂಚಿಕೆ ವಿಶೇಷವಾಗಿತ್ತು. ಈ ಎರಡು ತರಬೇತಿಗಳಲ್ಲಿ ಗದಗ ಜಿಲ್ಲೆಯಿಂದ ಒಟ್ಟು 60 ಜನ ರೈತರು ಪಾಲ್ಗೊಂಡಿದ್ದರು. ಒಟ್ಟಾರೆಯಾಗಿ ಈ ವಿನೂತನ ತರಬೇತಿಗಳಲ್ಲಿ ಒಣಬೇಸಾಯದಲ್ಲಿ ಒಕ್ಕಲುತನ

ಮಾಡುತ್ತಿರುವ ರೈತರು ಕೂಡಾ ಕೃಷಿಯಲ್ಲಿ ಏನೆಲ್ಲಾ ಅಳವಡಿಸಬಹುದು ಹಾಗೂ ಕೃಷಿಯನ್ನು ಹೇಗೆ ಲಾಭದಾಯಕವಾಗಿ ಮಾಡಲಿಕ್ಕೆ ಸಾಧ್ಯವಿದೆ ಎಂದು ಕಂಡುಕೊಂಡರು.

## ತ್ರೈಮಾಸಿಕದಲ್ಲಿ ಏರ್ಪಡಿಸಿದ ತರಬೇತಿಗಳು

- ಜನೇವರಿ, ಫೆಬ್ರುವರಿ, ಮಾರ್ಚ 2017: ಗದಗ ತಾಲೂಕಿನ ಹುಯಿಲಗೋಳ, ಕದಡಿ, ಹರ್ತಿ ಹಾಗೂ ಬೆಟಗೇರಿ ಸರ್ಕಲನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕಿಯರಿಗೆ ಆಹಾರ, ಆರೋಗ್ಯ, ಪೌಷ್ಠಿಕತೆ, ಆಹಾರದಲ್ಲಿ ಸಿರಿಧಾನ್ಯಗಳ ಮಹತ್ವ ಕುರಿತು ತರಬೇತಿಗಳನ್ನು ಆಯೋಜಿಸಲಾಯಿತು.
- ಜನೇವರಿ, ಫೆಬ್ರುವರಿ, ಮಾರ್ಚ 2017: ವೈಜ್ಞಾನಿಕ ಹೈನುಗಾರಿಕೆ ಕುರಿತು ಗದಗ ಜಿಲ್ಲೆಯ 437 ಜನ ಯುವಕ ಹಾಗೂ ಯುವತಿಯರಿಗೆ 6 ದಿನಗಳ ಅವಧಿಯ 10 ತರಬೇತಿಗಳನ್ನು ಆಯೋಜಿಸಲಾಯಿತು.
- ಫೆಬ್ರುವರಿ 2, 2017 : ಗದಗ ತಾಲೂಕಿನ ಬಿಂಕದಕಟ್ಟಿ ಗ್ರಾಮದ 24 ಜನ ರೈತಮಹಿಳೆಯರಿಗೆ ದಿನನಿತ್ಯ ಆಹಾರದಲ್ಲಿ ಸಿರಿಧಾನ್ಯಗಳ ಮಹತ್ವ ಹಾಗೂ ಮೌಲ್ಯವರ್ಧನೆ ಕುರಿತು ಒಂದು ದಿನದ ತರಬೇತಿಯನ್ನು ಆಯೋಜಿಸಲಾಯಿತು.
- ಫೆಬ್ರುವರಿ 3, 2017: ಭಾರತೀಯ ಸ್ಟೇಟ ಬ್ಯಾಂಕ ಸಹಯೋಗದೊಂದಿಗೆ ಕೇಂದ್ರದಲ್ಲಿ ನಗದು ರಹಿತ ವ್ಯವಹಾರ ಕುರಿತು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 50 ಜನ ವಿಸ್ತರಣಾ ಕಾರ್ಯಕರ್ತರಿಗೆ ತಿಳುವಳಿಕೆ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು.
- ಫೆಬ್ರುವರಿ 27-28, 2017: ಗದಗ ಜಿಲ್ಲಾ ತೋಟಗಾರಿಕೆ ಇಲಾಖೆ ಅಡಿ ಸುಜಲಾ ಜಲಾನಯನ ಅಭಿವೃದ್ಧಿ ಯೋಜನೆ ಹಾಗೂ ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇವರ ಸಂಯುಕ್ತ ಆಶ್ರಯದಲ್ಲಿ ಗದಗ ಜಿಲ್ಲೆಯ 50 ಜನ ರೈತರಿಗೆ ಸಮಗ್ರ ತೋಟಗಾರಿಕೆ ಬೆಳೆಗಳ ಕುರಿತು ಎರಡು ದಿನಗಳ ತರಬೇತಿಯನ್ನು ಆಯೋಜಿಸಲಾಯಿತು.
- ಮಾರ್ಚ 2017: ಗದಗ, ಮುಂಡರಗಿ, ಶಿರಹಟ್ಟಿ ತಾಲೂಕಿನ 7 ಗ್ರಾಮಗಳಲ್ಲಿ ಹಣ್ಣಿನ ಬೇಸಾಯ ಕುರಿತು ಹೊರ ಆವರಣ ತರಬೇತಿಗಳನ್ನು ಆಯೋಜಿಸಲಾಯಿತು.

## ವಿವಿಧ ಕಾರ್ಯಕ್ರಮಗಳಲ್ಲಿ ಕೇಂದ್ರದ ಸಿಬ್ಬಂದಿ ಭಾಗವಹಿಸಿದ ವಿವರಗಳು

- ಫೆಬ್ರುವರಿ 2, 2017 : ನಿರ್ದೇಶಕರು, ಅಟಾರಿ, ಬೆಂಗಳೂರು ಇವರು ಏರ್ಪಡಿಸಿದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿಯಲ್ಲಿ ಗೊಂಚಲು ಮುಂಚೂಣಿ ಪ್ರಾತ್ಯಕ್ಷಿಕೆ ಕಾರ್ಯಾಗಾರದಲ್ಲಿ ಕೇಂದ್ರದ ಶ್ರೀ ವಿ.ಡಿ.ವೈಕುಂಠೆ ಮತ್ತು ಶ್ರೀ ಎಸ್.ಕೆ.ಮುದ್ಲಾಪೂರ ಇವರು ಭಾಗವಹಿಸಿದ್ದರು.
- ಫೆಬ್ರುವರಿ 6, 2017 : ಶ್ರೀ ಎಸ್.ಎಚ್.ಆದಾಪೂರ ಇವರು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ಏರ್ಪಡಿಸಿದ ಆತ್ಮಾ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.
- ಫೆಬ್ರುವರಿ 13, 2017 : ಕೃಷಿ ವಿಶ್ವವಿದ್ಯಾಲಯ, ಧಾರವಾಡದಲ್ಲಿ ಏರ್ಪಡಿಸಿದ ಜಲಕ್ರಾಂತಿ ಅಭಿಯಾನ ಕಾರ್ಯಾಗಾರದಲ್ಲಿ ಕೇಂದ್ರದ ಶ್ರೀ ಎನ್.ಎಚ್.ಭಂಡಿ ಭಾಗವಹಿಸಿದ್ದರು.
- ಫೆಬ್ರುವರಿ 20, 2017 : ಮ್ಯಾನೇಜ, ಹೈದರಾಬಾದ ಇವರು ಏರ್ಪಡಿಸಿದ ಕೃಷಿಯಲ್ಲಿ ಕೌಶಲ್ಯ ಅಭಿವೃದ್ಧಿ ಕುರಿತ ತರಬೇತಿ ಹಾಗೂ ಚರ್ಚಾ ಗೋಷ್ಠಿಯಲ್ಲಿ ಕೇಂದ್ರದ ಶ್ರೀ ಕೆ.ಟಿ. ಪಾಟೀಲ ಭಾಗವಹಿಸಿದ್ದರು.
- ಫೆಬ್ರುವರಿ 21-24, 2017: ಜಿಕೆವಿಕೆ, ಬೆಂಗಳೂರಿನಲ್ಲಿ ಏರ್ಪಡಿಸಿದ ಹವಾಮಾನ ಸ್ಮಾರ್ಟ ಕೃಷಿ ಕುರಿತು 13 ನೇ ಕೃಷಿ ವಿಜ್ಞಾನ ಕಾಂಗ್ರೆಸ್ ನಲ್ಲಿ ಕೇಂದ್ರದ ಶ್ರೀ ಎನ್.ಎಚ್.ಭಂಡಿ ಹಾಗೂ ಮಹಾಲಿಂಗಪೂರ ಗ್ರಾಮದ ಪ್ರಗತಿಪರ ರೈತರು ಭಾಗವಹಿಸಿದ್ದರು.
- ಫೆಬ್ರುವರಿ 21-25, 2017 : ಶ್ರೀ ಎಸ್.ಎಚ್.ಆದಾಪೂರ ಇವರು ಕೃಷಿ ವಿಜ್ಞಾನ ಕೇಂದ್ರ, ಈರೋಡ, ತಮಿಳನಾಡಿ ನಲ್ಲಿ ಏರ್ಪಡಿಸಿದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.
- ಫೆಬ್ರುವರಿ 23-24, 2017: 2017-18 ನೇ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರಗಳು ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಕುರಿತ ಪೂರ್ವಭಾವಿ ಕ್ರಿಯಾ ಯೋಜನೆಯ ಸಭೆಯನ್ನು ಕೃಷಿ ವಿಜ್ಞಾನ ಕೇಂದ್ರ, ಶಿರಸಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಡಾ॥ ಎಲ್.ಜಿ.ಹಿರೇಗೌಡರ, ಮುಖ್ಯಸ್ಥರು, ಶ್ರೀ

ಕೆ.ಟಿ.ಪಾಟೀಲ, ವಿಷಯ ತಜ್ಞರು (ತೋಟಗಾರಿಕೆ), ಶ್ರೀ ಎಸ್.ಕೆ.ಮುದ್ಲಾಪೂರ, ವಿಷಯ ತಜ್ಞರು (ಸಸ್ಯ ಸಂರಕ್ಷಣೆ), ಡಾ. ಸುಧಾ ರಾಯನಗೌಡರ, ವಿಷಯ ತಜ್ಞರು (ಗೃಹ ವಿಜ್ಞಾನ) ಹಾಗೂ ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ) ಭಾಗವಹಿಸಿದ್ದರು.

- ಫೆಬ್ರುವರಿ 28: ಶ್ರೀ ಎನ್.ಎಚ್.ಭಂಡಿ ಇವರು ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕಿನಲ್ಲಿ ಏರ್ಪಡಿಸಿದ ನೀರಿನ ನಿರ್ವಹಣೆ ಯೋಜನೆಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.
- ಮಾರ್ಚ 2-4, 2017 : ತೋಟಗಾರಿಕೆ ವಿಶ್ವ ವಿದ್ಯಾಲಯ ಬಾಗಲಕೋಟದಲ್ಲಿ ಏರ್ಪಡಿಸಿದ 2017-18 ನೇ ಸಾಲಿನಲ್ಲಿ ಕೃಷಿ ವಿಜ್ಞಾನ ಕೇಂದ್ರಗಳ ಕಾರ್ಯಕ್ರಮಗಳ ಕ್ರಿಯಾ ಯೋಜನೆ ಸಭೆಗೆ ಕೇಂದ್ರದ ಮುಖ್ಯಸ್ಥರಾದ ಡಾ|| ಎಲ್.ಜಿ.ಹಿರೇಗೌಡರ ಅವರು ಭಾಗವಹಿಸಿ ಕ್ರಿಯಾ ಯೋಜನೆಯನ್ನು ಮಂಡಿಸಿದರು.
- ಮಾರ್ಚ 7-8, 2017 : ಅಗ್ರಿಕಲ್ಚರಲ್ ಟೆಕ್ನಾಲಜಿ ಅಪ್ಲಿಕೇಶನ್ ರಿಸರ್ಚ ಇನ್ಸ್ಟಿಟ್ಯೂಟ್, ಬೆಂಗಳೂರು ಹಾಗೂ ತಮಿಳನಾಡು ಕೃಷಿ ವಿಶ್ವವಿದ್ಯಾಲಯ ಕೊಯಿಮತ್ತೂರಿನಲ್ಲಿ ಜಂಟಿಯಾಗಿ ಆಯೋಜಿಸಿದ್ದ ಕೃಷಿ ವಿಜ್ಞಾನ ಕೇಂದ್ರಗಳ ಸಿಂಪೋಜಿಯಂನಲ್ಲಿ ಕೇಂದ್ರದ ಶ್ರೀ ಎಸ್.ಎಚ್.ಆದಾಪೂರ, ಶ್ರೀ ಎನ್.ಎಚ್.ಭಂಡಿ ಹಾಗೂ ಡಾ|| ಸುಧಾ ರಾಯನಗೌಡರ ಭಾಗವಹಿಸಿ ವಿವಿಧ ವಿಷಯಗಳ ಕುರಿತು ಪೋಸ್ಟರ ಮಂಡಿಸಿದರು. ಕೊಯ್ಲು ನಂತರದ ತಂತ್ರಜ್ಞಾನ ವಿಭಾಗದಲ್ಲಿ 'ಉತ್ತಮ ಪೋಸ್ಟರ್ ಪ್ರಸೆಂಟೇಶನ್' ಪ್ರಶಸ್ತಿ ಕೇಂದ್ರಕ್ಕೆ ದೊರಕಿತು.


ಪ್ರಧಾನ ಸಂಪಾದಕರು ಹಾಗೂ ಪ್ರಕಾಶಕರು:
ಡಾ|| ಎಲ್.ಜಿ.ಹಿರೇಗೌಡರ
ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಸಂಪಾದಕರು:
ಡಾ|| ಸುಧಾ ರಾಯನಗೌಡರ
ವಿಜ್ಞಾನಿಗಳು (ಗೃಹ ವಿಜ್ಞಾನ)

ಕಾರ್ಯಕ್ರಮಗಳ ಸಂಯೋಜಕರು:
ಶ್ರೀ ವ್ಹಿ.ಡಿ.ವೈಕುಂಠೆ, ವಿಜ್ಞಾನಿಗಳು (ಬೇಸಾಯ ಶಾಸ್ತ್ರ)
ಶ್ರೀ ಎಸ್.ಕೆ.ಮುದ್ಲಾಪೂರ, ವಿಜ್ಞಾನಿಗಳು (ಸಸ್ಯ ಸಂರಕ್ಷಣೆ)
ಶ್ರೀ ಕೆ.ಟಿ.ಪಾಟೀಲ, ವಿಜ್ಞಾನಿಗಳು (ತೋಟಗಾರಿಕೆ)
ಶ್ರೀ ಎನ್.ಎಚ್.ಭಂಡಿ, ವಿಜ್ಞಾನಿಗಳು (ಮಣ್ಣು ವಿಜ್ಞಾನ)
ಶ್ರೀ ಎಸ್.ಎಚ್. ಆದಾಪೂರ, ವಿಜ್ಞಾನಿಗಳು (ಕೃಷಿ ವಿಸ್ತರಣೆ)
ಶ್ರೀ ಸುರೇಶ ಹಳೇಮನಿ, ಫಾರ್ಮ ಮ್ಯಾನೇಜರ
ಡಾ|| ಬಿ.ಎಮ್.ಮುರಗೋಡ, ಕಾರ್ಯಕ್ರಮ ಸಹಾಯಕರು (ಪಶು ಸಂಗೋಪನೆ)

ವಿನ್ಯಾಸ ಹಾಗೂ ಅಕ್ಷರ ಜೋಡಣೆ:
ಶ್ರೀಮತಿ ಲಲಿತಾ ಅಸೂಟಿ, ಕಾರ್ಯಕ್ರಮ ಸಹಾಯಕರು (ಗಣಕ ಯಂತ್ರ)

ಸಹಾಯ:
ಶ್ರೀ ಎಮ್.ಬಿ.ಜಕ್ಕನಗೌಡರ, ಕಚೇರಿ ಅಧೀಕ್ಷಕರು



ಮುದ್ರಕರು ಹಾಗೂ ಪ್ರಕಾಶಕರು: ಡಾ|| ಎಲ್.ಜಿ.ಹಿರೇಗೌಡರ, ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು, ಐ.ಸಿ.ಎ.ಆರ್-ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ-582205, ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಫೋನ್: (08372)289606, ಇ-ಅಂಚೆ:kvkhulkoti@gmail.com, ಅಂತರ್ಜಾಲ: www.khpkvk.org